2016 ಕ.ತೀ.ವ. 1029

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ

## ಶ್ರೀಯುತ ಎಂ. ಪಿಚ್ಚಯ್ಯ ಮತ್ತು ಇತರರು –ವಿರುದ್ಧ– ಶ್ರೀಯುತ ಕೆ.ಎಸ್. ಪೆರಿಯ ಸ್ವಾಮಿ *

ದಂಡ ಪ್ರಕ್ರಿಯಾ ಸಂಹಿತೆ ಕಲಂ 482ರಡಿಯಲ್ಲಿ ಕ್ರಿಮಿನಲ್ ಅರ್ಜಿ.

ಎದುರುದಾರರು ಹೂಡಿದ ಫಿರ್ಯಾದನ್ನಾಧರಿಸಿ ಅರ್ಜಿದಾರರನ್ನು ಕಂಪನಿ ಕಾಯಿದೆ ಕಲಂ 447ರಡಿಯಲ್ಲಿ ರಕ್ಷಿಸಬಹುದಾದ ಆರೋಪಿತರನ್ನಾಗಿ ಮಾಡಿ ಪ್ರಕರಣದ ಸಂಜ್ಞೇಯತೆಯನ್ನು ತೆಗೆದುಕೊಂಡ ಅಧಿವಿಚಾರಣಾ ನ್ಯಾಯಾಲಯದ ಕ್ರಮವನ್ನು ಪ್ರಶ್ನಿಸಿ ಸದರಿ ಅರ್ಜಿ.

ದಂಡಾಧಿಕಾರಿಗಳು ಪ್ರಕರಣದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವಾಗ ಸ್ವತಂತ್ರವಾಗಿ ಯಾವುದೇ ವಿವೇಚನೆಯನ್ನು ಉಪಯೋಗಿಸಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಅವರ ಮುಂದಿದ್ದ ನಡವಳಿಗಳನ್ನು ರದ್ದುಗೊಳಿಸಿ ಸದರಿ ಅರ್ಜಿಯನ್ನು ಪುರಸ್ಕರಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು:* | *ಪ್ಯಾರಾಗಳಲ್ಲಿ* |
|---|---|
| *1. 1998 ಕ್ರಿ.ಲಾ.ಜ. 2826 (ಎಸ್‌ಸಿ) ಮೊಹಮದ್ ಹಾದಿ ರಾಜ –ವಿರುದ್ಧ– ಬಿಹಾರ ರಾಜ್ಯ* | *(ಉಲ್ಲೇ) 5* |

* ಕ್ರಿಮಿನಲ್ ಅರ್ಜಿ ಸಂಖ್ಯೆ: 718/2015, ಇದರೊಂದಿಗೆ 7836/2013, ದಿನಾಂಕ: 26ನೇ ನವೆಂಬರ್, 2015

2. *2013 ಎಐಆರ್ ಎಸ್‌ಸಿಡಬ್ಲ್ಯೂ 660*
*ರಘುವಂಶಿ –ವಿರುದ್ಧ– ಅಜಯ್ ಅರೋರಾ* *(ಉಲ್ಲೇ) 5*
3. *(2012) 13 ಎಸ್‌ಸಿಸಿ 614*
*ಸತೀಶ್ ಮೆಹರ –ವಿರುದ್ಧ– ಸರ್ಕಾರ*
*(ದೆಹಲಿಯ ಎನ್‌ಸಿಟಿ) ಮತ್ತು ಇನ್ನೊಬ್ಬರು* *(ಉಲ್ಲ) 7*
4. *(1982) 1 ಎಸ್‌ಸಿಸಿ 561*
*ಪಶ್ಚಿಮ ಬಂಗಾಳ ಸರ್ಕಾರ ಮತ್ತು ಇತರರು*
*–ವಿರುದ್ಧ– ಸ್ವಪನ್ ಕುಮಾರ್ ಗುಹಾ*
*ಮತ್ತು ಇತರರು* *(ಉಲ್ಲೇ) 8*
5. *1998 ಸಿಆರ್‌ಎಲ್ ಕ್ರಿ.ಲಾ.ಜ. 2826*
*ಮೊಹಮದ್ ಹಾದಿ ರಾಜ –ವಿರುದ್ಧ–*
*ಬಿಹಾರ ಸರ್ಕಾರ ಮತ್ತು ಮತ್ತೊಬ್ಬರು* *(ಉಲ್ಲೇ) 9*
6. *1992 ಎಸ್‌ಯುಪಿಪಿ(1) ಎಸ್‌ಸಿಸಿ 335*
*ಹರಿಯಾಣ ಸರ್ಕಾರ ಮತ್ತು ಇತರರು –ವಿರುದ್ಧ–*
*ಬಜನ್ ಲಾಲ್ ಮತ್ತು ಇತರರು* *(ಉಲ್ಲೇ) 10*
7. *(2010)3 ಎಸ್‌ಸಿಸಿ 330*
*ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ*
*–ವಿರುದ್ಧ– ಹರ್‌ಮೀತ್ ಸಿಂಗ್ ಪೈಂಟಾಲ್*
*ಮತ್ತು ಮತ್ತೊಬ್ಬರು* *(ಉಲ್ಲೇ) 10*
8. *(2008) 5 ಎಸ್‌ಸಿಸಿ 668*
*ಮಕ್ಸುದ್ ಸೈಯದ್ –ವಿರುದ್ಧ–*
*ಗುಜರಾತ್ ಸರ್ಕಾರ ಮತ್ತು ಇತರರು* *(ಉಲ್ಲೇ) 10*

ಅರ್ಜಿದಾರರ ಪರ : ಶ್ರೀ ರಾಜೇಶ್ ಡಿ.ಎಂ. ಅವರ ಹಿರಿಯ ವಕೀಲರಾದಂಥ
ಶ್ರೀ ಕೆ.ಜಿ. ರಾಘವನ್, ನ್ಯಾಯವಾದಿ,
ಪ್ರತ್ಯರ್ಜಿದಾರರ ಪರ : ಸ್ವತಃ ಪಕ್ಷಗಾರರೇ ವಾದಿಸಿರುತ್ತಾರೆ.

## ಆಜ್ಞೆ

**ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ :**

ಕಂಪನಿಗಳ ಅಧಿನಿಯಮ, 2013ರ 447ರ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧದ ಸಂಬಂಧದಲ್ಲಿ ಇಲ್ಲಿನ ಪ್ರತ್ಯರ್ಜಿದಾರರು ಸಲ್ಲಿಸಿದ ಖಾಸಗಿ ಫಿರ್ಯಾದಿನಲ್ಲಿ ಇಲ್ಲಿನ ಅರ್ಜಿದಾರರು ಆಪಾದಿತ ವ್ಯಕ್ತಿಗಳೆಂದು ದೋಷಾರೋಪಿತರಾಗಿರುತ್ತಾರೆ. ಆಪಾದಿತ ವ್ಯಕ್ತಿಗಳ ವಿರುದ್ಧ ನ್ಯಾಯಾಲಯದಿಂದ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಗಿರುತ್ತದೆ.

2. ಫಿರ್ಯಾದುದಾರರು ಮೆ॥ ಬಿಇಎಂಎಲ್ ಲಿ. ಕಂಪನಿ, ಬೆಂಗಳೂರು ಇದರ ಷೇರುದಾರಕರಾಗಿರುತ್ತಾರೆಂಬುದೇ ಫಿರ್ಯಾದುದಾರರ ವಾದವಾಗಿದೆ. ಭಾರತದ ರಾಷ್ಟ್ರಪತಿಗಳೇ ಸಾರ್ವಜನಿಕ ಹಣವನ್ನು ಹೂಡುವ ಮೂಲಕ ಶೇ. 54.03ರಷ್ಟು ಈಕ್ವಿಟಿ ಷೇರುಗಳನ್ನು ಹೊಂದಿರುವ ಪ್ರಮುಖ ಷೇರು ಧಾರಕರಾಗಿರುತ್ತಾರೆ. ಇವರೇ ಕಂಪನಿಗಳ ಅಧಿನಿಯಮದಡಿಯಲ್ಲಿ ಬಿಇಎಂಎಲ್ ಲಿ. ಕಂಪನಿ (ಇನ್ನು ಮುಂದೆ ಸಂಕ್ಷಿಪ್ತವಾಗಿ ಕಂಪನಿಯೆಂದು ಕರೆಯಲಾಗಿದೆ)ಯ ಅಸೋಸಿಯೇಷನ್ ಅನುಚ್ಛೇದಗಳು ಮತ್ತು ಅಸೋಸಿಯೇಷನ್‌ನ ಜ್ಞಾಪನದಡಿಯಲ್ಲಿ ನಿರ್ದೇಶಕರುಗಳ ಮಂಡಳಿಯನ್ನು ನೇಮಕ ಮಾಡುತ್ತಾರೆ. ಕಂಪನಿಯ ನಿರ್ದೇಶಕರ ಮಂಡಳಿಯು 2012–13ನೇ ಸಾಲಿನ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ 122.00 ಕೋಟಿ ರೂ.ಗಳಷ್ಟರ ಮಟ್ಟಿಗೆ ಕಂಪನಿಯು ನಷ್ಟವನ್ನು ಹೊಂದಿದ್ದಾಗ್ಯೂ 2012–13ನೇ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಕಂಪನಿಯ ಷೇರುಧಾರಕರಿಗೆ ಶೇ.25ರಷ್ಟನ್ನು ಲಾಭಾಂಶವನ್ನು ಶಿಫಾರಸು ಮಾಡಿದೆ. ಇದು ಕಂಪನಿ ಅಧಿನಿಯಮ, 1956ರ 205ನೆಯ ಪ್ರಕರಣಕ್ಕೆ ಮತ್ತು ಕಂಪನಿಗಳ ಅಧಿನಿಯಮ, 2013 (ಇನ್ನು ಮುಂದೆ ಅಧಿನಿಯಮ ಎಂದು ಕರೆಯಲಾಗಿದೆ)ರ 123 ಪ್ರಕರಣಕ್ಕೆ ವಿರುದ್ಧವಾದುದಾಗಿರುತ್ತದೆ. 13.09.2013ರಂದು 49ನೇ ಎಜಿಎಂ ನಡೆದಿದ್ದು, ಇದನ್ನು ಷೇರುಧಾರಕರು ಪ್ರಶ್ನಿಸಿರುತ್ತಾರೆ. ಆದರೆ ಸರಿಯಾದ ಮರು ಉತ್ತರ ದೊರಕಿರುವುದಿಲ್ಲ. ಲಾಭಾಂಶ

ವಾರಂಟನ್ನು ಕಳುಹಿಸಲಾಗಿರುತ್ತದೆ. ಫಿರ್ಯಾದುದಾರನು ಇ–ಮೇಲ್ ಮೂಲಕ ಕಂಪನಿ ಕಾರ್ಯದರ್ಶಿಗೆ ಆಕ್ಷೇಪವನ್ನು ಕಳುಹಿಸಿರುತ್ತಾನೆ. ಆತ, ಲಾಭಾಂಶದ ಮೊತ್ತವನ್ನು ನೋಂದಾಯಿತ ಅಂಚೆಯ ಮೂಲಕ ಕಂಪನಿ ಕಾರ್ಯದರ್ಶಿಗೆ ಹಿಂತಿರುಗಿಸಿರುತ್ತಾನೆ. 1ನೇ ಆಪಾದಿತ ಸ್ಥಾನದಲ್ಲಿ ಕಂಪನಿಯಾಗಿರುತ್ತದೆ, 2ನೇ ಆಪಾದಿತರು ಚೇರ್ಮನ್ ಮತ್ತು ಜನರಲ್ ಮ್ಯಾನೇಜರ್ ಆಗಿರುತ್ತಾರೆ. ಆಪಾದಿತ ಸಂಖ್ಯೆ 3 ರಿಂದ 14 ಮತ್ತು 16ರವರುಗಳು ನಿರ್ದೇಶಕರಾಗಿರುತ್ತಾರೆ. ಆಪಾದಿತ ಸಂಖ್ಯೆ 15 ಕಂಪನಿ ಕಾರ್ಯದರ್ಶಿಗಳಾಗಿರುತ್ತಾರೆ ಮತ್ತು ಆಪಾದಿತ ಸಂಖ್ಯೆ 17 ಆಪಾದಿತ ಸಂಖ್ಯೆ 1ರ ಬಿಜಿಎಂ ಆಗಿದ್ದು, ಆಪಾದಿತ ಅಪರಾಧಕ್ಕೆ ಹೊಣೆಗಾರರಾಗಿರುತ್ತಾರೆ.

3. ಫಿರ್ಯಾದುದಾರರಿಂದ ಹೇಳಿಕೆಯ ಪ್ರಮಾಣವನ್ನು ದಾಖಲಿಸಿದ ಮೇಲೆ, ಮಾನ್ಯ ಮ್ಯಾಜಿಸ್ಟ್ರೇಟ್ / ವಿಶೇಷ ನ್ಯಾಯಾಲಯ, ಬೆಂಗಳೂರು ಇವರು 2013ರ ಅಧಿನಿಯಮದ 447ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಸಂಜ್ಞೇಯತೆಯನ್ನು ತೆಗೆದುಕೊಂಡು ಸಮನುಗಳನ್ನು ಹೊರಡಿಸಿರುತ್ತದೆ.

4. ಅರ್ಜಿದಾರರ ಪರ ಹಾಜರಾಗಿದ್ದ ಹಿರಿಯ ನ್ಯಾಯವಾದಿ ಮಾನ್ಯ ಶ್ರೀ ಕೆ.ಜಿ. ರಾಘವನ್‌ರವರು ಕೇವಲ ಫಿರ್ಯಾದುದಾರನ ಫಿರ್ಯಾದನ್ನು ಪರಿಶೀಲಿಸಿದಲ್ಲಿ 1956ರ ಅಧಿನಿಯಮದ 205ನೇ ಪ್ರಕರಣ ಮತ್ತು 2013ರ ಅಧಿನಿಯಮದ 123ನೇ ಪ್ರಕರಣದ ಆಜ್ಞಾಪನೆಯ ವಿರುದ್ಧ ಯಾವುದೇ ಅಪರಾಧವನ್ನು ಮಾಡಿರುವುದಿಲ್ಲವೆಂಬುದನ್ನು ಮತ್ತು ಯಾವುದೇ ಉಲ್ಲಂಘನೆಯನ್ನು ಮಾಡಿರುವುದಿಲ್ಲವೆಂಬುದನ್ನು ಬಹಿರಂಗಪಡಿಸುತ್ತದೆಂದು ನಿವೇದಿಸಿಕೊಂಡಿರುತ್ತಾರೆ. 2013ರ ಅಧಿನಿಯಮದ 123ನೇ ಪ್ರಕರಣವನ್ನು ಉಲ್ಲಂಘಿಸಲಾಗಿದೆಯೆಂದು ಫಿರ್ಯಾದಿನಲ್ಲಿ ಆಪಾದಿಸಲಾಗಿರುತ್ತದೆ. ಆದರೆ, ಸದರಿ ಉಪಬಂಧವನ್ನು 01.04.2015ರಿಂದ ಮಾತ್ರ ಜಾರಿಗೆ ತರಲಾಗಿರುತ್ತದೆ ಮತ್ತು ಲಾಭಾಂಶವು 13.09.2013ರಂದು ನಡೆದ ಎಜಿಎಂ ನಲ್ಲಿ ಘೋಷಿಸಿರುವುದರಿಂದ ಪ್ರಸ್ತುತ ಪ್ರಕರಣಕ್ಕೆ

ಅನ್ವಯುವಾಗುವುದಿಲ್ಲವೆಂದು ನಿವೇದಿಸಿದ್ದಾರೆ. 2013ರ ಅಧಿನಿಯುಮದ 123 ಪ್ರಕರಣಕ್ಕೆ ಫಿರ್ಯಾದುದಾರನು ಉದ್ಧರಿಸಿರುವ ಸಮಾನವಾದ ಉಪಬಂಧವು 1956ರ ಅಧಿನಿಯಮದ 205(1) ಪ್ರಕರಣವಾಗಿರುತ್ತದೆ. 2012–13ರ ವಾರ್ಷಿಕ ಲೆಕ್ಕಪತ್ರಗಳ ಪ್ರಕಾರ ಹಿಂದಿನ ಹಣಕಾಸು ವರ್ಷಾವಧಿಯಲ್ಲಿ ಕಂಪನಿಯು ಲಾಭವನ್ನು ಮಾಡಿಕೊಂಡಿಲ್ಲವೆ ಎಂಬುದರ ಬಗ್ಗೆ ಫಿರ್ಯಾದುದಾರನ ದೃಢೋಕ್ತಿಗಳು ನಿರ್ದಿಷ್ಟತೆಯನ್ನು ಪಡೆದುಕೊಂಡಿರುವುದಿಲ್ಲ. ಕಂಪನಿಯ ಲಾಭ ಮತ್ತು ನಷ್ಟದ ಆರಂಭಿಕ ಶಿಲ್ಕು 363.18 ಕೋಟಿ ರೂ.ಗಳಾಗಿವೆ; 2012–13ಕ್ಕೆ ಕೊನೆಗೊಳ್ಳುವ ವರ್ಷಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಮೀಸಲು ನಿಧಿಗೆ ವರ್ಗಾವಣೆ ಮಾಡಿದ ಮೊಬಲಗು 36.32 ಕೋಟಿ ರೂ.ಗಳು; 10.41 ಕೋಟಿ ರೂ.ಗಳ ಪ್ರಸ್ತಾಪಿತ ಲಾಭಾಂಶವನ್ನು ಮೀಸಲು ನಿಧಿಗೆ ವರ್ಗಾವಣೆ ಮಾಡದೆ ಹಿಂದಿನ ವರ್ಷಕ್ಕೆ ಸಂಬಂಧಿಸಿದ ಲಾಭಾಂಶದಿಂದ ಘೋಷಿಸಲಾಗಿರುತ್ತದೆ; ಲಾಭಾಂಶವನ್ನು ಘೋಷಿಸಿದ ತರುವಾಯ, ಬಾಕಿ ಮೊಬಲಗನ್ನು ಸಾಮಾನ್ಯ ಮೀಸಲು ನಿಧಿಗೆ ವರ್ಗಾವಣೆ ಮಾಡಲಾಗಿದೆ. ಲಾಭಾಂಶದ ಘೋಷಣೆಯು ಸಂಘದ ಅನುಚ್ಛೇದಗಳ 125ನೇ ಅನುಚ್ಛೇದದ ಪ್ರಕಾರ ಎಜಿಎಂನ ಷೇರುಧಾರಕದಿಂದ ಆಗಿರುತ್ತದೆ. ಕಂಪನಿಯ ನಿರ್ದೇಶಕರುಗಳಿಗೆ ಲಾಭಾಂಶಗಳ ಘೋಷಣೆಯ ಬದ್ಧತೆಯನ್ನು ಹೇರಲಾಗಿರುವುದಿಲ್ಲ. ಲಾಭಾಂಶವನ್ನು ಘೋಷಿಸುವ ಮೂಲಕ ಮೋಸವನ್ನು ಎಸಗುವ ಯಾವುದೇ ಕ್ರಿಮಿನಲ್ ಉದ್ದೇಶವು ಅರ್ಜಿದಾರರಿಗೆ ಇರುವುದಿಲ್ಲ. 1956ರ ಅಧಿನಿಯಮದ 205–ಎ(3) ಪ್ರಕರಣವನ್ನಾಗಲೀ ಇಲ್ಲವೆ ಕಂಪನಿಗಳ (ಮೀಸಲುಗಳಿಂದ ಲಾಭಾಂಶದ ಘೋಷಣೆ) ನಿಯಮಗಳು, 1975ರ ಉಲ್ಲಂಘನೆಯಾಗಲೀ ಆಗಿರುವುದಿಲ್ಲ. ಹಿಂದಿನ 2012–13ರ ವರ್ಷಾವಧಿಯ ಹಿಂದಿನ ವರ್ಷಗಳಲ್ಲಿ ನಿರಂತರವಾಗಿ ಕಂಪನಿಯು ನಷ್ಟವನ್ನು ಅನುಭವಿಸಿರುತ್ತದೆಂಬುದು ಫಿರ್ಯಾದುದಾರನ ವಾದವಾಗಿರುವುದಿಲ್ಲ. ಮಾನ್ಯ ಮ್ಯಾಜಿಸ್ಟ್ರೇಟರು, ತಮ್ಮ ಮನಸ್ಸನ್ನು ವಿಷಯದಲ್ಲಿ ಸರಿಯಾಗಿ ಏಕಾಗ್ರಗೊಳಿಸದೆ ಯಾಂತ್ರಿಕವಾಗಿ ಸಂಜ್ಞೇಯತೆಯನ್ನು ತೆಗೆದುಕೊಂಡಿರುತ್ತಾರೆ. ಕಂಪನಿಯ 41,900 ವಂತಿಗೆದಾರ ಷೇರುಗಳ ಪೈಕಿ, ಫಿರ್ಯಾದುದಾರರು ಅತ್ಯಲ್ಪ ಪ್ರಮಾಣದ 100 ಷೇರುಗಳನ್ನು ಹೊಂದಿರುತ್ತಾರೆ. ಕಂಪನಿಯ ಯಾವುದೇ ಷೇರುಗಳನ್ನು ಇದರ ಷೇರುಧಾರಕರು ಹೊಂದಿರುವುದಿಲ್ಲ. ಕಂಪನಿಯ ಯಾವುದೇ ಷೇರುಗಳನ್ನು,

ಷೇರುಗಳ ಮಾರಾಟ/ಬಂಡವಾಳ ಹಿಂತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಐಚ್ಛಿಕಗಳು ಮತ್ತು ಗುತ್ತಿಗೆಗಳು / ಸಂಪರ್ಕಗಳಡಿಯಲ್ಲಿ ವಿತರಿಸುವುದಕ್ಕೆ ಸಂಬಂಧಿಸಿದಂತೆ ಮೀಸಲಿರಿಸಿರುವುದಿಲ್ಲ. ಫಿರ್ಯಾದುದಾರರನ್ನು ರಿಟ್ ಅರ್ಜಿ ಸಂ.33756/2011 (ಜಿಎಂ–ಆರ್‌ಇಎಸ್ – ಪಿಐಎಲ್) ರಲ್ಲಿ ಶ್ರೀಯುತ ಕೆ. ಸುಬ್ರಮಣಿ ಶಾಸ್ತ್ರಿಯವರು ಪ್ರತಿನಿಧಿಸಿರುತ್ತಾರೆ. ಈ ಮೊದಲು ಇವರು ಉದ್ಯೋಗಿಯಾಗಿದ್ದು, ದುರ್ನಡತೆಯು ರುಜುವಾತಾದ ಕಾರಣ ಇವರನ್ನು ಸೇವೆಯಿಂದ ವಜಾಗೊಳಿಸಲಾಗಿತ್ತು. ಮೇಲಿನ ರಿಟ್ ಅರ್ಜಿಯನ್ನು ಅಂದಿನ ಸಿಎಂಡಿ ಮತ್ತು 1ನೇ ಅರ್ಜಿದಾರ ಕಂಪನಿ ಮತ್ತು ಇತರರು ಕಬ್ಬಿಣದ ಅದಿರನ್ನು ಕಾನೂನುಬಾಹಿರವಾಗಿ ರಫ್ತು ಮಾಡಿರುವುದನ್ನು ಸಿಬಿಐ ಮೂಲಕ ತನಿಖೆ ನಡೆಸಬೇಕೆಂದು ಕೋರಿ ಸಲ್ಲಿಸಿರುತ್ತಾರೆ. ಸದರಿ ರಿಟ್ ಅರ್ಜಿ ವಜಾಗೊಂಡಿರುತ್ತದೆ. ಈ ರಿಟ್ ಅರ್ಜಿಯನ್ನು ವಜಾಗೊಳಿಸುವಾಗ ನ್ಯಾಯಾಲಯವು, ಅರ್ಜಿಯನ್ನು ಕೇವಲ ವೈಯಕ್ತಿಕ ಉದ್ದೇಶದಿಂದ ಮಾತ್ರ ಸಲ್ಲಿಸಲಾಗಿದೆಯೆಂದು ಅಭಿಪ್ರಾಯಪಟ್ಟಿರುತ್ತದೆ. 5000/– ರೂ.ಗಳ ಪ್ರಾತಿನಿಧಿಕ ವೆಚ್ಚವನ್ನು, ಅರ್ಜಿಯನ್ನು ವಜಾಗೊಳಿಸುವಾಗ ವಿಧಿಸಲಾಗಿರುತ್ತದೆ. ಪ್ರಸ್ತುತ ಫಿರ್ಯಾದನ್ನು ಸಲ್ಲಿಸಿರುವ ಅರ್ಜಿದಾರರ ಕೃತ್ಯವು ದುರುದ್ದೇಶ ಪೂರಿತವಾದುದಾಗಿರುತ್ತದೆ. 1 ರಿಂದ 14ರ ವರೆಗಿನ ಅರ್ಜಿದಾರರನ್ನು ಪ್ರಾಸಿಕ್ಯೂಟ್ ಮಾಡಲು ಯಾವುದೇ ಮಂಜೂರಾತಿಯನ್ನು ತೆಗೆದುಕೊಂಡಿರುವುದಿಲ್ಲ ಮತ್ತು ಅವರನ್ನು ಭಾರತದ ರಾಷ್ಟ್ರಪತಿಗಳು ನೇಮಕ ಮಾಡಿದ್ದು, ಅವರನ್ನು ಭಾರತದ ರಾಷ್ಟ್ರಪತಿಗಳೇ ವಜಾಗೊಳಿಸಬಲ್ಲವರಾಗಿರುತ್ತಾರೆ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 197ನೇ ಪ್ರಕರಣದ ಉಪಬಂಧಗಳು ಅನ್ವಯಿಸುತ್ತವೆ. ಅರ್ಜಿದಾರರನ್ನು ಪ್ರಾಸಿಕ್ಯೂಟ್ ಮಾಡುವ ಮತ್ತು ಮಂಜೂರಾತಿ ಪಡೆದುಕೊಳ್ಳಲೇಬೇಕಾಗಿರುತ್ತದೆ. ಕಂಪನಿಯ ಕೃತ್ಯಗಳಿಗೆ ಸಂಬಂಧಿಸಿದಂತೆ ಕಾನೂನು ಬಾಹಿರ ಅಪರಾಧದಲ್ಲಿ ಅವರು ಒಳಗೊಂಡಿದ್ದಾರೆಂದು ಅಥವಾ ಅನ್ಯಥಾ ಕಾನೂನು ಬಾಹಿರ ಕೃತ್ಯಗಳಿಗೆ ಸಂಬಂಧಿಸಿದಂತೆ ಇತರೆ ರೀತಿಯಲ್ಲಿ ಜವಾಬ್ದಾರರಾಗಿದ್ದಾರೆಂದು ಫಿರ್ಯಾದಿನಲ್ಲಿನ ಯಾವುದೇ ದೃಢೋಕ್ತಿಗಳು ಇಲ್ಲದಿರುವುದಕ್ಕೆ ಸಂಬಂಧಿಸಿದಂತೆ ಕಂಪನಿಯ ನಿರ್ದೇಶಕರು ಅಥವಾ ಅಧಿಕಾರಿಗಳು ಬದ್ಧರಾಗಿರುವುದಿಲ್ಲ. ಅರ್ಜಿದಾರರ ವಿರುದ್ಧದ

ನಡಾವಳಿಗಳು ಕಾನೂನಿನ ಸ್ಪಷ್ಟ ದುರುಪಯೋಗವಾಗಿದ್ದು, ಇದು ವಜಾಗೊಳಿಸಲು ತಕ್ಕುದಾಗಿರುತ್ತದೆಯೆಂದು ನಿವೇದಿಸಿದ್ದಾರೆ.

5. ಇದಕ್ಕೆ ಉತ್ತರವಾಗಿ, ಪಕ್ಷಕಾರರಾದ ಶ್ರೀ ಕೆ.ಎಸ್. ಪೆರಿಯಾಸ್ವಾಮಿಯವರೇ, ಖುದ್ದಾಗಿ, 29.05.2013ರಂದು ನಡೆದ ಸಭೆಯಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯು 2012–13ನೇ ಸಾಲಿಗೆ ಸಂಬಂಧಿಸಿದಂತೆ ಪ್ರತೀ ಷೇರಿಗೆ 2.50/–ರೂ. (ಶೇ.25) ಗಳ ದರದಲ್ಲಿ ಲಾಭಾಂಶವನ್ನು ಶಿಫಾರಸು ಮಾಡಲಾಗಿರುತ್ತದೆಂದು ಸ್ಟಾಕ್ ಎಕ್ಸ್‌ಚೇಂಜ್‌ಗೆ ಮಾಹಿತಿ ನೀಡಿರುತ್ತದೆಂಬ ವಾಸ್ತವಾಂಶದಲ್ಲಿ ಯಾವುದೇ ವಿವಾದವಿರುವುದಿಲ್ಲವೆಂಬುದನ್ನು ನಿವೇದನೆ ಮಾಡಿಕೊಂಡಿರುತ್ತಾರೆ. 2012–13ರ 49ನೇ ವಾರ್ಷಿಕ ವರದಿಯ ಪ್ರಕಾರ ತೆರಿಗೆ ಕಟ್ಟುವುದಕ್ಕೆ ಮೊದಲಿನ ಲಾಭ/ನಷ್ಟವು 12,233.54 ಲಕ್ಷಗಳಾಗಿರುತ್ತವೆ. ಕಂಪನಿಯು ಸಂದಾಯ ಮಾಡಿದ ಷೇರು ಬಂಡವಾಳವು 41.64ಕೋಟಿ ರೂ.ಗಳಾಗಿರುತ್ತದೆ. ಸದರಿ ಸಭೆಯಲ್ಲಿ ದಾಖಲಾದ ಅಧ್ಯಕ್ಷರ ಹೇಳಿಕೆಯ ಪ್ರಕಾರ, ಕಂಪನಿಯು 122 ಕೋಟಿ ರೂ.ಗಳ ನಷ್ಟವನ್ನು ಹೊಂದಿರುತ್ತದೆ, ನಿರ್ದೇಶಕರ ಮಂಡಳಿಯು, ಲಾಭಾಂಶದ ಮೇಲೆ ತೆರಿಗೆಯ ಸಂದಾಯುವನ್ನು ಒಳಗೊಂಡಂತೆ 12.18ಕೋಟಿ ರೂ.ಗಳನ್ನು ಲೀನಗೊಳಿಸಿದಂಥ ಕಂಪನಿಯ ಸಂದಾಯ ಬಂಡವಾಳದ ಮೇಲೆ ಪ್ರತಿ ಷೇರಿಗೆ 2.50/– ರೂ.ಗಳಷ್ಟು ಅಂದರೆ ಶೇ.25ರಷ್ಟು ಲಾಭಾಂಶವನ್ನು ಶಿಫಾರಸು ಮಾಡಲಾಗಿರುತ್ತದೆ. 1956ರ ಅಧಿನಿಯಮದ 205ನೇ ಪ್ರಕರಣದ ಮೇರೆಗೆ ಲಾಭಾಂಶವನ್ನು ಲಾಭದ ಮೇಲೆ ಮಾತ್ರ ಸಂದಾಯ ಮಾಡಬೇಕಾಗಿರುತ್ತದೆ. 1956ರ ಅಧಿನಿಯಮದ 205(ಎ)(3)ನೇ ಪ್ರಕರಣದ ಮೇರೆಗೆ, ಹಿಂದಿನ ವರ್ಷಗಳಲ್ಲಿ ಕಂಪನಿಯು ಗಳಿಸಿದ ಲಾಭಗಳು ಹಾಗೂ ಮೀಸಲುಗಳಿಂದ ವರ್ಗಾವಣೆ ಮಾಡಿ ಸೇರಿದಂಥ ಲಾಭಗಳ ಪೈಕಿ ಲಾಭಾಂಶವನ್ನು ಕಂಪನಿಯು ಘೋಷಿಸಿದಾಗ, ಅಂಥ ಲಾಭಾಂಶದ ಘೋಷಣೆಯನ್ನು ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ರೂಪಿಸಬಹುದಾದಂಥ ನಿಯಮಗಳಿಗನುಸಾರವಾಗಿ ಹೊರತುಪಡಿಸಿ ನೀಡತಕ್ಕದ್ದಲ್ಲ. ಅಂಥ ನಿಯಮಗಳಿಗನುಸಾರವಾಗಿ ಘೋಷಣೆಯು ಇಲ್ಲದಿದ್ದಲ್ಲಿ, ಅಂಥ ಘೋಷಣೆಯನ್ನು ಕೇಂದ್ರ ಸರ್ಕಾರದ ಹಿಂದಿನ ಅನುಮೋದನೆಯೊಂದಿಗೆ ಹೊರತುಪಡಿಸಿ ಮಾಡತಕ್ಕದ್ದಲ್ಲ.

***ಮೊಹಮದ್ ಹಾದಿ ರಾಜ –ವಿರುದ್ಧ– ಬಿಹಾರ ಸರ್ಕಾರ*** [1]**,** ಪ್ರಕರಣದಲ್ಲಿ ವರದಿಯಾದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನಲೆಯಲ್ಲಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 197ರ ಪ್ರಕರಣದಡಿಯಲ್ಲಿನ ಮಂಜೂರಾತಿಯನ್ನು ಸರ್ಕಾರವು ಹೊಂದಿದ್ದಾಗ್ಯೂ, ಕಂಪನಿಯ ಮತ್ತು ಅದರ ನಿರ್ದೇಶಕರುಗಳನ್ನು ಮುಂದುವರೆಸಲು ಪೂರ್ವ ಕೋರಿಕೆಯನ್ನು ಪಡೆದಿರುವುದಿಲ್ಲ. ಹಾಗಾಗಿ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 197ನೇ ಪ್ರಕರಣದಡಿಯಲ್ಲಿನ ಸಂರಕ್ಷಣೆಯು ಆಪಾದಿತ ವ್ಯಕ್ತಿಗಳಿಗೆ ಅನ್ವಯವಾಗುವುದಿಲ್ಲ.

ಆಪಾದಿತ ಸಂ.2 ರಿಂದ 5 ಮತ್ತು 7 ರಿಂದ 15ರ ಆಪಾದಿತರು 29.05.2013ರ ದಿನಾಂಕದ ಮಂಡಳಿ ಸಭೆಯಲ್ಲಿ ಭಾಗವಹಿಸಿದ್ದ, ಸಭೆಯ ನಡಾವಳಿಗೆ ಸಹಿ ಹಾಕಿದ್ದರು. ಆಪಾದಿತ ಸಂ.16 ಮತ್ತು 17ರವರುಗಳು ಲಾಭಾಂಶ ವಾರಂಟಿಗೆ ಸಹಿ ಹಾಕಿದವರಾಗಿರುತ್ತಾರೆ. ವಂಚನೆ ಮಾಡುವಲ್ಲಿ ಅವರು ನೇರವಾಗಿ ಕಾರಣವಾಗಿರುವುದರಿಂದ, 2013ರ ಅಧಿನಿಯಮದ 447ನೇ ಪ್ರಕರಣದಡಿಯಲ್ಲಿ ದಂಡನೀಯವಾಗಿದ್ದು, ಇದು 12.09.2013ರಿಂದ ಜಾರಿಗೆ ಬರುತ್ತದೆ. ಪ್ರಾಸಿಕ್ಯೂಷನ್‌ಗೆ ಸಂಬಂಧಿಸಿದ ವಾದವನ್ನು ಫಿರ್ಯಾದುದಾರನ ದೃಢೋಕ್ತಿಗಳಿಂದ ಆಪಾದಿತ ಸಂಖ್ಯೆ 2 ರಿಂದ 17ರ ವರೆಗೆ ರೂಪಿಸಲಾಗಿರುತ್ತದೆ. ***ರಘುವಂಶಿ –ವಿರುದ್ಧ– ಅಜಯ್ ಅರೋರ*** [2]**,** ರವರ ಪ್ರಕರಣದಲ್ಲಿ ವರದಿಯಾದ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯವು ವಿಧಿಸಿರುವ ತತ್ವಗಳು, ಕ್ರಿಮಿನಲ್ ನಡಾವಳಿಯನ್ನು ವಜಾಗೊಳಿಸುವುದಕ್ಕೆ ಸಂಬಂಧಿಸಿದಂತೆ ಪ್ರಕರಣವನ್ನು ಪರಿಗಣಿಸುವಾಗ, ನ್ಯಾಯಾಲಯವು, ***"ಹುಟ್ಟಲಿರುವ ಮಗುವನ್ನು ಕೊಲೆ ಮಾಡಬಾರದು"*** ಎಂದು ಹಾಗೂ ಸಮುಚಿತ ಪ್ರಾಸಿಕ್ಯೂಷನ್, ಹಾಗೆ ಮಾಡಲು ಸಂದರ್ಭಗಳನ್ನು ಒತ್ತಾಯ ಮಾಡದ ಹೊರತು ನಿಗ್ರಹ ಮಾಡಲಾಗುವುದಿಲ್ಲವೆಂಬುವಾಗಿರುತ್ತವೆ. ಅರ್ಜಿಗಳು ವಜಾಗೊಳ್ಳಲು ತಕ್ಕವಾಗಿರುತ್ತವೆಂದು ನಿವೇದಿಸಿದ್ದಾರೆ.

---

1. 1998 ಕ್ರಿ.ಲಾ.ಜ. 2826 (ಎಸ್‌ಸಿ)  2. 2013 ಎಐಆರ್ ಎಸ್‌ಸಿಡಬ್ಲ್ಯೂ 660

6. ಕೊನೆಯದಾಗಿ, ಫಿರ್ಯಾದುದಾರನು, 2013ರ ಅಧಿನಿಯಮದ 447ನೇ ಪ್ರಕರಣದಡಿಯಲ್ಲಿ ಆಪಾದಿತ ವ್ಯಕ್ತಿಗಳನ್ನು ಪ್ರಾಸಿಕ್ಯೂಟ್ ಮಾಡಲು ಕೋರಿಕೊಂಡಿರುತ್ತಾನೆ. ಸದರಿ ಉಪಬಂಧದ ಆರಂಭಿಕ ಪದಗಳನ್ನು ಓದಲಾಗಿರುತ್ತದೆ:

> ***447ನೇ ಪ್ರಕರಣ. ಅಪರಾಧಕ್ಕೆ ಸಂಬಂಧಿಸಿದ ದಂಡನೆ:***
> *ತತ್ಕಾಲದಲ್ಲಿ ಜಾರಿಯಲ್ಲಿರುವಂಥ ಈ ಅಧಿನಿಯಮ ಅಥವಾ ಇತರೆ ಕಾನೂನಿನಡಿಯಲ್ಲಿ ಯಾವುದೇ ಋಣದ ಮರು ಸಂದಾಯವನ್ನು ಒಳಗೊಂಡಂತೆ ಯಾವುದೇ ಬದ್ಧತೆಗೆ ಬಾಧಕವಿಲ್ಲದೆ, ಮೋಸದ ತಪಿತಸ್ಥನೆಂದು ಕಂಡುಬಂದಂಥ ಯಾರೇ ವ್ಯಕ್ತಿಯು ದಂಡನೀಯನಾಗತಕ್ಕದ್ದು . . . . .*

ಮೋಸವನ್ನು, 1956ರ ಅಥವಾ 2013ರ ಅಧಿನಿಯಮದಲ್ಲಾಗಲೀ ಇಲ್ಲವೇ ನೇರವಾಗಿ ಮೋಸಕ್ಕೆ ಸಂಬಂಧಿಸಿದ ಭಾರತ ದಂಡ ಸಂಹಿತೆಯಾಗಲೀ ಪರಿಭಾಷಿಸಲಾಗಿಲ್ಲ. ಆದಾಗ್ಯೂ, ಈ ಪ್ರಕರಣದ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ನ್ಯಾಯಿಕ ತೀರ್ಪುಗಳ ಮೂಲಕ ಮೋಸವನ್ನು ಬೇರೆ ಬೇರೆ ರೀತಿಯಲ್ಲಿ ಪರಿಭಾಷಿಸಲಾಗಿರುತ್ತದೆ.

ಮೋಸ ಎಂಬ ಪದವು ಪದಕೋಶದಲ್ಲಿ ವ್ಯಾಪಕಾರ್ಥವನ್ನು ಹೊಂದಿದೆ. ಆದಾಗ್ಯೂ, ಫಿರ್ಯಾದುದಾರನ ಪ್ರಕಾರ 1956ರ ಅಧಿನಿಯಮದ 125ನೇ ಪ್ರಕರಣದ/ 2013ರ ಅಧಿನಿಯಮದ 123ನೇ ಪ್ರಕರಣದ ಉಲ್ಲಂಘನೆಯು 2013ರ ಅಧಿನಿಯಮದ 447ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧಕ್ಕೆ ಕಾರಣವಾಗಿರುತ್ತದೆ. ಮೋಸದ ಕೃತ್ಯಗಳ ವಿವರಗಳನ್ನು ಹೊರ ತರದೆ, ಮೋಸದ ಅಪರಾಧದ ಸಂಬಂಧದಲ್ಲಿ ಕ್ರಮವನ್ನು ಕೋರಲಾಗಿರುತ್ತದೆ. ಮೋಸವನ್ನು ಸಾಮಾನ್ಯರ ಮಾತಿನಲ್ಲಿ ಅರ್ಥಮಾಡಿಕೊಂಡಂತೆ ಇದು ಒಬ್ಬರ ಅನುಕೂಲಕ್ಕೆ ಮತ್ತು ಮತ್ತೊಬ್ಬರ ಅನಾನುಕೂಲಕ್ಕೆ ಸಂಬಂಧಿಸಿದ ಸಂಚಾಗಿರುತ್ತದೆ. ದೂರು ಸಾಕ್ಷ್ಯಗಳನ್ನು ಹೊಂದಿದ್ದಾಗ್ಯೂ, ಪ್ರಸ್ತುತ, 29.05.2013ರ ಸರ್ವ ಸದಸ್ಯರ ಸಭೆಯಲ್ಲಿ ಆಪಾದಿತ

ವ್ಯಕ್ತಿಗಳು ಭಾಗವಹಿಸಿರುವುದನ್ನು ವಂಚನೆಯೆಂದೇ ರೂಪಿಸಲಾಗಿರುತ್ತದೆ. ಇಡೀ ಆಪಾದನೆಯು, ಠರಾವನ್ನೇ ಕೇಂದ್ರೀಕರಿಸಿರುತ್ತದೆ. ಅದರಿಂದ, ಲಾಭಾಂಶವನ್ನು ಹಿಂದಿನ ಹಣಕಾಸು ವರ್ಷಗಳ ಲಾಭಾಂಶದ ಮೇಲೆ ಘೋಷಿಸಲಾಗಿರುತ್ತದೆ. ಸ್ವತಃ ಫಿರ್ಯಾದಿನ ದೃಢೋಕ್ತಿಗಳ ಮೇರೆಗೆ ಇದು ಷೇರುಧಾರಕರ ಸರ್ವ ಸದಸ್ಯರ ಸಭೆಯಲ್ಲಿ ಅಂಗೀಕರಿಸಿದ ಠರಾವೇ ಆಗಿರುತ್ತದೆ. ಹಾಗಿರುವುದರಿಂದ, ಸಭೆಯಲ್ಲಿ ಹೊರಡಿಸಿದ ಠರಾವಿನ ಸಂಬಂಧದಲ್ಲಿ ಫಿರ್ಯಾದಿನಲ್ಲಿ ಹೆಸರಿಸಿದ ಆಪಾದಿತನ ವಿರುದ್ಧ ಅಪರಾಧಿತ್ವವನ್ನು ಆರೋಪಿಸುವುದು ತಾತ್ವಿಕವಾಗಿ ದೂರವಾದುದೆ ಆಗಿರುತ್ತದೆ. ಅದರೊಂದಿಗೆ, ಫಿರ್ಯಾದಿನಲ್ಲಿ ಆಪಾದನೆಯು ಅಸ್ಪಷ್ಟವಾಗಿಯೂ, ಅಸಂದಿಗ್ಧವಾಗಿಯೂ ಇದ್ದು ಠರಾವಿನ ಪರಾಮರ್ಶನದಲ್ಲಿ ಅರ್ಜಿದಾರರ ಅಪರಾಧಿತ್ವವನ್ನು ಬಯಲಿಗೆಳೆಯದಿರುವುದು ಸ್ಪಷ್ಟವಾದುದಾಗಿರುತ್ತದೆ. ಕಂಪನಿ ಕಾರ್ಯದರ್ಶಿಯು ಸಲ್ಲಿಸಿದ ಅಫಿಡಾವಿಟ್ಟಿನಲ್ಲಿ, 7 ರಿಂದ 14ರ ವರೆಗಿನ ಆಪಾದಿತರು ಅರೆಕಾಲಿಕ ಸರ್ಕಾರೇತರ ನಿರ್ದೇಶಕರುಗಳಾಗಿರುವುದು 2ನೇ ಆಪಾದಿತರು ಅಧ್ಯಕ್ಷರು/ವ್ಯವಸ್ಥಾಪನಾ ನಿರ್ದೇಶಕರಾಗಿರುವುದು (ಗಣಿ ಮತ್ತು ನಿರ್ಮಾಣ) ಮತ್ತು ಆಪಾದಿತ ಸಂ.3 ಮಾಜಿ – ಮಹಾ ನಿರ್ದೇಶಕರು, ಆಪಾದಿತ ಸಂ.16 ನಿರ್ದೇಶಕರು (ಹಣಕಾಸು)ಗಳಾಗಿರುತ್ತಾರೆ ಮತ್ತು ಅವರುಗಳು ಭಾರತದ ಮಾನ್ಯ ರಾಷ್ಟ್ರಪತಿಗಳಿಂದ ನೇಮಕವಾಗಿದ್ದು, ಅವರುಗಳನ್ನು ಭಾರತದ ರಾಷ್ಟ್ರಪತಿಗಳ ಆದೇಶದ ಹೊರತಾಗಿ ತೆಗೆದುಹಾಕುವಂತಿಲ್ಲವೆಂಬುದನ್ನು ತೋರಿಸಲಾಗಿರುತ್ತದೆ.

ಫಿರ್ಯಾದಿನ ಮತ್ತೊಂದು ಆಸಕ್ತಿದಾಯಕ ಲಕ್ಷಣವೆಂದರೆ ಆಪಾದನೆಯು ಸಂಬಂಧಪಟ್ಟಿರುವ ಸಭೆಯ ಠರಾವು 2013ರ ಅಧಿನಿಯಮದ 123ನೇ ಪ್ರಕರಣದ ಉಲ್ಲಂಘನೆಯ ಸಂಬಂಧದಲ್ಲಿ ಕ್ರಮ ಕೋರಿದ್ದು, ಈ ಉಪಬಂಧವು 01.04.2014ರಿಂದ ಜಾರಿ ಮಾಡಲಾಗಿರುವುದಾಗಿರುತ್ತದೆ. 2013ರ 29.05.2013ನೇ ದಿನಾಂಕದಂದು ನಡೆದಿರುತ್ತದೆ. ಅಧಿನಿಯಮದ 123ನೇ ಪ್ರಕರಣವನ್ನು ಹೊರತುಪಡಿಸಿದರೆ, 1956ರ ಅಧಿನಿಯಮದ 205ನೇ ಪ್ರಕರಣವನ್ನು ಮಾತ್ರ ಪರಿಗಣಿಸಬೇಕಾಗಿರುತ್ತದೆ, ಆದರೆ ಫಿರ್ಯಾದನ್ನು ಉಲ್ಲೇಖಿಸಿರುವ 1956ರ ಅಧಿನಿಯಮದ 205ನೇ ಪ್ರಕರಣದ 1ನೇ ಉಪ–ಪ್ರಕರಣವನ್ನೇ ಮೋಸದಿಂದ

ಉಲ್ಲಂಘಿಸಿರುತ್ತಾರೆಂದು ಆಪಾದಿಸಲಾಗಿದೆ. ಆದರೆ 205ನೇ ಇಡೀ ಪ್ರಕರಣದ ಪರಿಶೀಲನೆಯ ಮೇಲೆ, ಯಾವುದೇ ಹಿಂದಿನ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಕಂಪನಿಯ ಲಾಭಾಂಶಗಳಿಂದ ಬಂದ ಲಾಭಾಂಶದ ಘೋಷಣೆಯನ್ನು ಒಪ್ಪಿಕೊಳ್ಳುತ್ತದೆ. 1956ರ ಅಧಿನಿಯಮದ 205(1) ಪ್ರಕರಣದ ಪರಂತುಕವನ್ನು ಈ ಮುಂದಿನಂತೆ ಓದಲಾಗಿರುತ್ತದೆ.

> *(ಎ) ಕಂಪನಿಗಳ (ತಿದ್ದುಪಡಿ) ಅಧಿನಿಯಮ, 1960 (1960ರ 65) ಆರಂಭವಾದ ತರುವಾಯ ಬರುವ ಯಾವುದೇ ಹಿಂದಿನ ಹಣಕಾಸು ವರ್ಷ ಅಥವಾ ವರ್ಷಗಳಿಗೆ ಸಂಬಂಧಿಸಿದಂತೆ ಕಂಪನಿಯು ಸವಕಳಿಗೆ ಸಂಬಂಧಿಸಿದಂತೆ ಅವಕಾಶ ಕಲ್ಪಿಸಿದ್ದಲ್ಲಿ, ಯಾವುದೇ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಲಾಭಾಂಶವನ್ನು ಘೋಷಿಸುವ ಅಥವಾ ಸಂದಾಯ ಮಾಡುವ ಮೊದಲು ಆ ಹಣಕಾಸು ವರ್ಷದ ಲಾಭಾಂಶಗಳಿಂದ ಅಥವಾ ಯಾವುದೇ ಹಿಂದಿನ ಹಣಕಾಸು ವರ್ಷ ಅಥವಾ ವರ್ಷಗಳ ಲಾಭಾಂಶಗಳಿಂದ ಅಂಥ ಸವಕಳಿಗೆ ಸಂಬಂಧಿಸಿದಂತೆ ಅವಕಾಶ ಕಲ್ಪಿಸತಕ್ಕದ್ದು;*
>
> *(ಬಿ) ಕಂಪನಿಗಳ (ತಿದ್ದುಪಡಿ) ಅಧಿನಿಯಮ, 1960 (1960ರ 65) ಆರಂಭವಾದ ತರುವಾಯ ಬರುವ ಯಾವುದೇ ಹಿಂದಿನ ಹಣಕಾಸು ವರ್ಷ ಅಥವಾ ವರ್ಷಗಳಲ್ಲಿ ಕಂಪನಿಯು ಯಾವುದೇ ನಷ್ಟವನ್ನು ಅನುಭವಿಸಿದರೆ, ಆ ನಷ್ಟಕ್ಕೆ ಸಮನಾದ ಮೊತ್ತ ಅಥವಾ ಆ ವರ್ಷದಲ್ಲಿ ಅಥವಾ ಆ ವರ್ಷಗಳಲ್ಲಿ ಸವಕಳಿಗಾಗಿ ಅವಕಾಶ ಕಲ್ಪಿಸಿದ ಮೊಬಲಗಿಗೆ ಸಮನಾದ ಮೊಬಲಗು, ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಘೋಷಿಸಬೇಕೆಂದು ಅಥವಾ ಸಂದಾಯ ಮಾಡಬೇಕೆಂದು ಲಾಭಾಂಶವನ್ನು*

*ಪ್ರಸ್ತಾಪಿಸಿದ ಲಾಭಾಂಶಕ್ಕೆ ಸಂಬಂಧಿಸಿದ ವರ್ಷಕ್ಕೆ ಸಂಬಂಧಿಸಿದಂತೆ ಕಂಪನಿಯ ಲಾಭಾಂಶಗಳಿಗೆ ಪ್ರತಿಯಾಗಿ ಅಥವಾ (2)ನೇ ಉಪ–ಪ್ರಕರಣಕ್ಕೆ ಅನುಸಾರವಾಗಿ ಅಥವಾ ಇವೆರಡರ ವಿರುದ್ಧ ಸವಕಳಿಗೆ ಸಂಬಂಧಿಸಿದಂತೆ ಅವಕಾಶ ಕಲ್ಪಿಸಿದ ತರುವಾಯ ಎರಡೂ ಪ್ರಕರಣಗಳಲ್ಲಿ ಬಂದಂಥ ಯಾವುದೇ ಹಿಂದಿನ ಹಣಕಾಸು ವರ್ಷ ಅಥವಾ ವರ್ಷಗಳಿಗೆ ಸಂಬಂಧಿಸಿದಂತೆ ಕಂಪನಿಯು ಲಾಭಾಂಶಗಳಿಗೆ ಪ್ರತಿಯಾಗಿ ವಜಾವಟ್ಟುಗೊಳಿಸತಕ್ಕದ್ದು.*

*ಸಿ) ಕೇಂದ್ರ ಸರ್ಕಾರವು, ಸಾರ್ವಜನಿಕರ ಹಿತಾಸಕ್ತಿಯಿಂದ ಹಾಗೆ ಮಾಡಬೇಕೆಂದು ಇಚ್ಛಿಸಿದಲ್ಲಿ, ಯಾವುದೇ ಕಂಪನಿಯನ್ನು, ಸವಕಳಿಗೆ ಸಂಬಂಧಿಸಿದಂತೆ ಅವಕಾಶ ಕಲ್ಪಿಸದೆ ಆ ವರ್ಷಕ್ಕೆ ಅಥವಾ ಯಾವುದೇ ಹಿಂದಿನ ಹಣಕಾಸು ವರ್ಷಕ್ಕೆ ಅಥವಾ ವರ್ಷಗಳಿಗೆ ಸಂಬಂಧಿಸಿದಂತೆ ಕಂಪನಿಯ ಲಾಭಾಂಶದಿಂದ ಯಾವುದೇ ಹಣಕಾಸು ವರ್ಷಗಳಿಗೆ ಸಂಬಂಧಿಸಿದಂತೆ ಲಾಭಾಂಶವನ್ನು ಘೋಷಿಸಲು ಅಥವಾ ಸಂದಾಯ ಮಾಡಲು ಯಾವುದೇ ಕಂಪನಿಯನ್ನು ಅನುಮತಿಸಬಹುದು.*

*ಮತ್ತೂ ಪರಂತು, ಕಂಪನಿಗಳ (ತಿದ್ದುಪಡಿ) ಅಧಿನಿಯಮ 1960 (1960ರ 65)ವು ಆರಂಭವಾಗುವುದಕ್ಕೆ ಮೊದಲು ಬಂದಂಥ ಯಾವುದೇ ಹಿಂದಿನ ಹಣಕಾಸು ವರ್ಷಗಳ ಲಾಭಾಂಶದಿಂದ, ಯಾವುದೇ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಲಾಭಾಂಶವನ್ನು ಘೋಷಿಸಿರುವಲ್ಲಿ ಅಥವಾ ಸಂದಾಯ ಮಾಡಿರುವಲ್ಲಿ ಮೇಲೆ ಹೇಳಿದಂತೆ ಯಾವುದೇ ಕಂಪನಿಗೆ ಸವಕಳಿ ಕಲ್ಪಿಸುವ ಅವಶ್ಯಕತೆ ಇರತಕ್ಕದ್ದಲ್ಲ.*

ಅರ್ಜಿದಾರರು ತೋರಿಸಿದಂತೆ ಹಿಂದಿನ ವರ್ಷಾವಧಿಯಲ್ಲಿ ಕಂಪನಿಯು ಯಾವುದೇ ಲಾಭವನ್ನು ಗಳಿಸಿರುವುದಿಲ್ಲವೆಂಬುದು ಕಂಪನಿಯ ವಾದವಾಗಿರುವುದಿಲ್ಲ. ವಿವಾದಾತೀತ ದಾಖಲೆಗಳು, 10.41ಕೋಟಿಗಳ ಪ್ರಸ್ತಾವಿತ ಲಾಭಾಂಶವನ್ನು ಮೀಸಲಿಗೆ ವರ್ಗಾವಣೆ ಮಾಡದ ಹಿಂದಿನ ವರ್ಷಗಳ ಲಾಭಾಂಶದಿಂದ ಘೋಷಿಸಲಾಗಿದೆಯೆಂಬುದನ್ನು ತೋರಿಸಿರುತ್ತವೆ. ಈ ನ್ಯಾಯಾಲಯದ ಮುಂದೆ ವಾದ–ವಿವಾದಗಳ ಹಂತದಲ್ಲಿ, ಫಿರ್ಯಾದುದಾರನು, ಹಿಂದಿನ ವರ್ಷದ ಲಾಭದಿಂದ ಲಾಭಾಂಶವನ್ನು ಘೋಷಿಸಲು, ಕೇಂದ್ರ ಸರ್ಕಾರದ ಪೂರ್ವಾನುಮತಿ ಅವಶ್ಯಕವಾದುದೆಂದು ವಾದಿಸಿರುತ್ತಾನೆ. 1956ರ ಅಧಿನಿಯಮದ 205 ಎ ಪ್ರಕರಣ ಹಾಗೂ ಸೂಕ್ತ ನಿಯಮಗಳನ್ನು ಉಲ್ಲಂಘಿಸಲಾಗಿರುತ್ತದೆ. ಆದರೆ ನ್ಯಾಯಾಲಯದಿಂದ ಸಂಜ್ಞೇಯತೆಯನ್ನು ತೆಗೆದುಕೊಂಡಿರುವುದರ ಮೇಲೆ ಫಿರ್ಯಾದಿನಲ್ಲಿ ಯಾವುದೇ ಆಪಾದನೆ ಇರುವುದಿಲ್ಲ.

7. ***ಸತೀಶ್ ಮೆಹರ –ವಿರುದ್ಧ– ಸರ್ಕಾರ (ದೆಹಲಿಯ ಎನ್‌ಸಿಟಿ) ಮತ್ತು ಇನ್ನೊಬ್ಬರು*** [3]**,** ಪ್ರಕರಣದ 21ನೇ ಪ್ಯಾರಾದಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯ ಪಟ್ಟಿರುತ್ತದೆ.

> ***21.*** *"ಒಂದು ಕ್ರಿಮಿನಲ್ ಅಧಿವಿಚಾರಣೆಯು, ಉತ್ಪ್ರೇಕ್ಷಿತ ಹಾಗೂ ನಿರ್ದಿಷ್ಟ ಗುರಿಯಿಲ್ಲದ ಭಾವಿತ ಅಧಿವಿಚಾರಣೆಯುನ್ನು ಅನುಮತಿಸಲಾಗುವುದಿಲ್ಲ. ಅಧಿವಿಚಾರಣೆಯಲ್ಲಿ ಕೆಲವು ವಸ್ತು ವಿಷಯಗಳು ಮತ್ತು ಆಪಾದಿತರು ಸಿಗುತ್ತವೆ ಅಥವಾ ಸಿಗುತ್ತಾರೆ ಎಂದು ಕೇವಲ ವಿಶ್ವಾಸ ಮತ್ತು ಭರವಸೆಗಳ ಆಧಾರದ ಮೇಲೆ ಕಾಲ ವ್ಯಯವಾಗುವ, ಬಿಗುವಿಲ್ಲದ ಹಾಗೂ ಅದೇ*

3. (2012) 13 ಎಸ್‌ಸಿಸಿ 614

> *ರೀತಿ ಮುಂದುವರೆಯುವ ಪ್ರಾಸಿಕ್ಯೂಷನ್ ಅನುಮತಿಯು ಕಾನೂನಿಗನುಸಾರವಾಗಿ ಅನುಮತೀಯವಾಗಿರುವುದಿಲ್ಲ. ಅಂಥ ಕ್ರಮವನ್ನು ಕ್ರಿಮಿನಲ್ ನ್ಯಾಯಶಾಸ್ತ್ರದ ವ್ಯವಸ್ಥೆಯಲ್ಲಿ ಉದ್ದೇಶಿಸಲಾಗಿರುವುದಿಲ್ಲ. ಅದು ಹಲವಾರು ವರ್ಷಗಳಿಂದ ನ್ಯಾಯಾಲಯಗಳಲ್ಲಿ ಮೌಲ್ಯ ನಿರ್ಣಯಗೊಳ್ಳುತ್ತಲೇ ಇದೆ. ಅದಕ್ಕೆ ಪ್ರತಿಯಾಗಿ ಒಂದು ಕ್ರಿಮಿನಲ್ ಅಧಿವಿಚಾರಣೆಯು, ಆಪಾದಿತನ ವಿರುದ್ಧದ ಅಧಿವಿಚಾರಣೆಯ ಸಂದರ್ಭದಲ್ಲಿ ಮುಖ್ಯವಾಗಿ ನಿರಾಪೇಕ್ಷಣೆಯ ಮತ್ತು ಒಪ್ಪಿಕೊಳ್ಳುವ ಸಾಕ್ಷ್ಯದ ಮೂಲಕ ರುಜುವಾತುಪಡಿಸಬೇಕಾದಂಥ ವಾಸ್ತವಾಂಶವನ್ನು ಆಪಾದಿತನಿಂದ ಅಪರಾಧ ಮಾಡಿರುವುದನ್ನು ಸುಸ್ಥಾಪಿಸಲು ಮೇಲ್ನೋಟಕ್ಕೆ ಕಂಡು ಬರುವಂಥ ನಿಶ್ಚಿತ ಆಪಾದನೆಗಳನ್ನು ಮಾತ್ರ ಉದ್ದೇಶವಾಗಿ ಇಟ್ಟುಕೊಂಡಿರುತ್ತದೆ."*

8. ಮೊದಲ ನೋಟದ ವಾದವನ್ನು ಬಹಿರಂಗಪಡಿಸಲು ವಿಫಲವಾದ ಫಿರ್ಯಾದು ವಜಾಗೊಳ್ಳುವುದಕ್ಕೆ ಬದ್ಧವಾಗಿರುತ್ತದೆಂಬುದು ಇತ್ಯರ್ಥಗೊಂಡ ಕಾನೂನಿನ ಪ್ರಸ್ತಾವವಾಗಿರುತ್ತದೆ.

ಫಿರ್ಯಾದಿನಲ್ಲಿನ ಆಪಾದನೆ ಹಾಗೂ ಸೂಕ್ತ ವಾಸ್ತವಾಂಶಗಳು ಇವೆರಡೂ, ಅಪರಾಧ, ಎಸಗಿರುವುದನ್ನು ಬಹಿರಂಗಪಡಿಸಲು ಒಟ್ಟಿಗೆ ವಿಫಲವಾದಾಗ ತನಿಖೆಯಲ್ಲಿ ಮಧ್ಯೆ ಪ್ರವೇಶಿಸಿ, ತನಿಖೆಯನ್ನು ನಿಲ್ಲಿಸುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆ. ***ಪಶ್ಚಿಮ ಬಂಗಾಳ ಸರ್ಕಾರ ಮತ್ತು ಇತರರು –ವಿರುದ್ಧ– ಸ್ವಪನ್ ಕುಮಾರ್ ಗುಹಾ ಮತ್ತು ಇತರರು*** [4], ಪ್ರಕರಣದ ಮೇರೆಗೆ)

4. (1982) 1 ಎಸ್‌ಸಿಸಿ 561

9. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 197ನೇ ಪ್ರಕರಣದಡಿಯಲ್ಲಿ ಮಂಜೂರಾತಿಯ ಪ್ರಶ್ನೆಯನ್ನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 197ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ತಾವು ಸರ್ಕಾರಿ ನೌಕರರಾಗಿರುತ್ತಾರೆಂಬ ಹಾಗೂ ಭಾರತದ ಮಾನ್ಯ ರಾಷ್ಟ್ರಾಧ್ಯಕ್ಷರ ಆದೇಶಗಳಿಲ್ಲದೆ ತೆಗೆದುಹಾಕುವಂತಿಲ್ಲವೆಂಬ ಆಧಾರದ ಮೇಲೆ, ***ಮೊಹಮದ್ ಹಾದಿ ರಾಜ –ವಿರುದ್ಧ– ಬಿಹಾರ ಸರ್ಕಾರ ಮತ್ತು ಮತ್ತೊಬ್ಬರು*** [5]**,** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಮೇಲೆ ಉದಾಹರಿಸಿದ ಪ್ರಾಸಿಕ್ಯೂಷನ್‌ನಿಂದ, ದಂಡನೆಯಲ್ಲಿ ವಿನಾಯಿತಿಯನ್ನು ಕೋರಿ ಅರ್ಜಿದಾರರು ವಾದವನ್ನು ಎತ್ತಿರುತ್ತಾರೆ. ಈ ಮುಂಚಿನ ತೀರ್ಪುಗಳ ಸಮೀಕ್ಷೆಯ ತರುವಾಯ, 197ರ ಪ್ರಕರಣದ ಉಪಬಂಧಗಳನ್ನು ಉದಾರವಾಗಿ ಅರ್ಥೈಸಿಕೊಳ್ಳುವ ಮೂಲಕ 197ನೇ ಪ್ರಕರಣದ ಪರಿಧಿಯೊಳಗೆ 'ಸಾರ್ವಜನಿಕ ವಲಯ ಉದ್ದಿಮೆಗಳ' ಅಧಿಕಾರಿಗಳನ್ನು ತರುವುದು ಸರಿಯಾದುದು ಮತ್ತು ಯುಕ್ತವಾದುದು ಆಗಿರುವುದಿಲ್ಲವೆಂದು ಅಂತಿಮವಾಗಿ ಅಭಿಪ್ರಾಯಪಡಲಾಗಿರುತ್ತದೆ. ಅಂಥ ವಿಶಾಲಾರ್ಥ ಜಾರಿ ಮಾಡುವುದನ್ನು ನ್ಯಾಯಾಲಯದ ಕಾನೂನಿನಿಂದ ಶಾಸನವನ್ನು ನಿರ್ವಚಿಸುವ ಅನುಮತೀಯ ಮಿತಿಯನ್ನು ಸ್ಥಿರೀಕರಿಸಲಾಗಿರುವುದಿಲ್ಲ, ಆದರೆ ನ್ಯಾಯಾಲಯದ ಮೂಲಕ ಶಾಸನ ರಚನೆಗೆ ಕಾರಣವಾಗಿರುತ್ತದೆ.

10. ಫಿರ್ಯಾದುದಾರರು, ಬಿಇಎಂಎಲ್‌ನ ವಜಾಗೊಂಡ ಉದ್ಯೋಗಿಯಾಗಿರುತ್ತಾನೆ. ಈ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ಅಂದಿನ ಮಾನ್ಯ ಮುಖ್ಯ ನ್ಯಾಯಮೂರ್ತಿಗಳು ಮುಖ್ಯಸ್ಥರಾಗಿದ್ದು, ಅರ್ಜಿದಾರರಾಗಿದ್ದ ಫಿರ್ಯಾದುದಾರರು ತಮ್ಮ ಪರವಾಗಿ ತಾವೆ ವಾದ ನಡೆಸುತ್ತಾ ಬಿಇಎಂಎಲ್‌ನ ವಿರುದ್ಧ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸುವಾಗ ವ್ಯಾಜ್ಯವನ್ನು ಸಂಪೂರ್ಣವಾಗಿ ವೈಯಕ್ತಿಕ ಉದ್ದೇಶಗಳಿಂದ ಹೂಡಲಾಗಿದೆಯೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಸರ್ವೋಚ್ಚ ನ್ಯಾಯಾಲಯವು, ***ಹರಿಯಾಣ ಸರ್ಕಾರ ಮತ್ತು ಇತರರು –ವಿರುದ್ಧ– ಬಜನ್ ಲಾಲ್ ಮತ್ತು ಇತರರು*** [6]**,** ಪ್ರಕರಣದಲ್ಲಿ, ಉದಾಹರಣೆಗಳ ಮೂಲಕ ಪ್ರಕರಣಗಳ

5. 1998 ಕ್ರಿ.ಲಾ.ಜ. 2826

6. 1992 ಎಸ್‌ಯುಪಿಪಿ(1) ಎಸ್‌ಸಿಸಿ 335

7 ಪ್ರವರ್ಗಗಳನ್ನು ಪಟ್ಟಿ ಮಾಡಿ, ಅದರಲ್ಲಿ ಭಾರತ ಸಂವಿಧಾನದ 226ರ ಅನುಚ್ಛೇದ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣಗಳಡಿಯಲ್ಲಿ ಉಚ್ಚ ನ್ಯಾಯಾಲಯದ ಅಧಿಕಾರವನ್ನು ನ್ಯಾಯಾಲಯದ ಕಾರ್ಯ ವಿಧಾನದ ದುರುಪಯೋಗ ಮಾಡಿಕೊಳ್ಳುವುದನ್ನು ತಪ್ಪಿಸಲು ಇಲ್ಲವೇ ಅಂತಿಮವಾಗಿ ನ್ಯಾಯವನ್ನು ಪಡೆಯಲು ಚಲಾಯಿಸಬಹುದೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಈ ಮುಂದಿನವುಗಳು ಸದರಿ ಉದಾಹರಣೆಗಳಾಗಿರುತ್ತವೆ.

> *(1) ಪ್ರಥಮ ಮಾಹಿತಿ ವರದಿ ಅಥವಾ ಫಿರ್ಯಾದಿನಲ್ಲಿ ಮಾಡಲಾದ ಆಪಾದನೆಗಳ, ಅವುಗಳನ್ನು ಅವುಗಳ ಮುಖಬೆಲೆಗೆ ಅನುಸಾರವಾಗಿ ತೆಗೆದುಕೊಂಡಲ್ಲಿ ಮತ್ತು ಅವುಗಳ ಸಮಗ್ರತೆಯಲ್ಲಿ ಒಪ್ಪಿಕೊಂಡಲ್ಲಿ ಕೂಡ ಯಾವುದೇ ಅಪರಾಧವನ್ನು ಒಂದೇ ಬಾರಿಗೆ ರಚಿಸದಿರುವೆಡೆಗಳಲ್ಲಿ ಅಥವಾ ಆಪಾದಿತನ ವಿರುದ್ಧ ವಾದವನ್ನು ರೂಪಿಸದಿರುವೆಡೆಗಳಲ್ಲಿ;*
>
> *(2) ಪ್ರಥಮ ಮಾಹಿತಿ ವರದಿ ಮತ್ತು ಇತರೆ ವಿಷಯಗಳಲ್ಲಿ ಮಾಡಲಾದ ಆಪಾದನೆಗಳು, ಯಾವುದನ್ನಾದರೂ ಪ್ರಥಮ ಮಾಹಿತಿ ವರದಿಗೆ ಸೇರಿಸಿದಲ್ಲಿ, ಸಂಹಿತೆಯ 155(2)ನೇ ಪ್ರಕರಣದ ಪುನರವಲೋಕನದೊಂದಿಗೆ ಮ್ಯಾಜಿಸ್ಟ್ರೇಟರ ಆದೇಶದಡಿಯಲ್ಲಿ ಹೊರತುಪಡಿಸಿ ಸಂಹಿತೆಯ 156(1)ನೇ ಪ್ರಕರಣದಡಿಯಲ್ಲಿ ಪೊಲೀಸ್ ಅಧಿಕಾರಿಗಳಿಂದ ತನಿಖೆಯನ್ನು ಸಮರ್ಥಿಸುವಾಗ ಸಂಜ್ಞೇಯ ಅಪರಾಧವನ್ನು ಬಹಿರಂಗಪಡಿಸದಿದ್ದಲ್ಲಿ;*

*(3) ಪ್ರಥಮ ಮಾಹಿತಿ ವರದಿ ಅಥವಾ ಫಿರ್ಯಾದಿನಲ್ಲಿ ರೂಪಿಸಲಾದ ನಿರ್ವಿವಾದ ಆಪಾದನೆಗಳು ಮತ್ತು ಇದಕ್ಕೆ ಪೂರಕವಾಗಿ ಸಂಗ್ರಹಿಸಿದ ಸಾಕ್ಷ್ಯಗಳು ಯಾವುದೇ ಅಪರಾಧ ಎಸಗಲು ಮತ್ತು ಆಪಾದಿತರ ವಿರುದ್ಧ ವಾದವನ್ನು ರೂಪಿಸಲು ಬಹಿರಂಗಪಡಿಸದಿದ್ದಲ್ಲಿ;*

*(4) ಪ್ರಥಮ ಮಾಹಿತಿ ವರದಿಯಲ್ಲಿನ ಆಪಾದನೆಗಳು, ಸಂಜ್ಞೇಯ ಅಪರಾಧಗಳನ್ನು ರೂಪಿಸದೆ, ಕೇವಲ ಅ–ಸಂಜ್ಞೇಯ ಅಪರಾಧಗಳನ್ನು ರೂಪಿಸಿದರೆ, ಸಂಹಿತೆಯ 155(2)ನೇ ಪ್ರಕರಣದಡಿಯಲ್ಲಿ ಉದ್ದೇಶಿಸಲಾದಂತೆ ಮ್ಯಾಜಿಸ್ಟ್ರೇಟರ ಆದೇಶವಿಲ್ಲದೆ ಪೋಲೀಸ್ ಅಧಿಕಾರಿಯು ಯಾವುದೇ ತನಿಖೆಯನ್ನು ಅನುಮತಿಸದಿರುವೆಡೆಯಲ್ಲಿ;*

*(5) ಆಪಾದಿತನ ವಿರುದ್ಧದ ವ್ಯವಹರಣೆಗೆ ಸಂಬಂಧಿಸಿದಂತೆ ಸಾಕಷ್ಟು ಆಧಾರಗಳಿರುತ್ತವೆಂಬ ಸರಳ ತೀರ್ಮಾನಕ್ಕೆ ಬರಲು ಯಾರೇ ವಿವೇಕಯುತ ವ್ಯಕ್ತಿಗೆ ಸಾಧ್ಯವಾಗದಿರುವಂಥ ಆಧಾರದ ಮೇಲೆ ಪ್ರಥಮ ಮಾಹಿತಿ ವರದಿ ಅಥವಾ ಫಿರ್ಯಾದಿನಲ್ಲಿ ಮಾಡಲಾದ ಆಪಾದನೆಗಳು ಅಸಂಬದ್ಧವಾಗಿದ್ದು, ಆಂತರ್ಯದಲ್ಲಿ ಅಸಂಭವವಾಗಿರುವೆಡೆಗಳಲ್ಲಿ;*

*(6) ವ್ಯವಹರಣೆಗಳನ್ನು ಆರಂಭಿಸಲು ಮತ್ತು ಮುಂದುವರೆಸಲು ಸಂಹಿತೆಯ ಅಥವಾ ಸಂಬಂಧಪಟ್ಟ ಅಧಿನಿಯಮದ ಯಾವುದೇ ಉಪಬಂಧಗಳಲ್ಲಿ (ಕ್ರಿಮಿನಲ್ ವ್ಯವಹರಣೆ ಆರಂಭವಾದುದಂಥದರಡಿಯಲ್ಲಿ) ವ್ಯಕ್ತಿ ಕಾನೂನು ಪ್ರತಿಷೇಧವಿರುವೆಡೆಗಳಲ್ಲಿ ಮತ್ತು / ಅಥವಾ*

*ಸಂಹಿತೆ ಅಥವಾ ಸಂಬಂಧಪಟ್ಟ ಅಧಿನಿಯಮದಲ್ಲಿ ಬಾಧಿತ ವ್ಯಕ್ತಿಯ ಕುಂದುಕೊರತೆಗೆ ಫಲಪ್ರದವಾದ ನಿವಾರಣೆಯನ್ನು ಉಪಬಂಧಿಸಲು ನಿರ್ದಿಷ್ಟ ಉಪಬಂಧವಿರುವೆಡೆ;*

*(7) ಕ್ರಿಮಿನಲ್ ವ್ಯವಹರಣೆಗಳನ್ನು ದುರ್ಭಾವನೆಯೊಂದಿಗೆ ವ್ಯಕ್ತವಾಗಿ ಅಭಿವ್ಯಕ್ತಿಸಿರುವೆಡೆಯಲ್ಲಿ ಮತ್ತು / ಅಥವಾ ಖಾಸಗಿ ಮತ್ತು ವೈಯಕ್ತಿಕ ಹಗೆಯಿಂದಾಗಿ ಆಪಾದಿತನ ಮೇಲೆ ಕಡು ಸೇಡಿನ ಗುಪ್ತ ಉದ್ದೇಶಗಳೊಂದಿಗೆ ವ್ಯವಹರಣೆಗಳನ್ನು ಸೇಡಿನಿಂದ ಆರಂಭಿಸಿರುವೆಡೆಗಳಲ್ಲಿ;*

ಪ್ರಸ್ತುತ ಪ್ರಕರಣಕ್ಕೆ ಇದೆ ಸಮಗ್ರತೆಯಲ್ಲಿ ಆಪಾದಿಸಲಾದ ವಾಸ್ತವಾಂಶಗಳನ್ನು ಒಪ್ಪಿಕೊಂಡ ತರುವಾಯ ಅಲ್ಲದೆ ವೈಯಕ್ತಿಕ ಉದ್ದೇಶದೊಂದಿಗೆ, ದ್ವೇಷ ಪೂರ್ವಕ ಪ್ರಾಸಿಕ್ಯೂಷನ್ ನಡೆಸಿರುವುದಕ್ಕೆ ಸಂಬಂಧಿಸಿದಂತೆ ಕೂಡ ಮೊದಲ ನೋಟಕ್ಕೆ ಒಪ್ಪಿಕೊಳ್ಳದಿದ್ದರೂ ಕೂಡ 1ನೇ ಪ್ರವರ್ಗ ಮತ್ತು 7ನೆ ಪ್ರವರ್ಗಗಳನ್ನು ಅನ್ವಯಿಸಬಹುದಾಗಿರುತ್ತದೆ. 1956ರ ಅಧಿನಿಯಮದ 205ನೇ ಪ್ರಕರಣದಡಿಯಲ್ಲಿ ಅರ್ಜಿದಾರರು, ಉಪಬಂಧಗಳನ್ನು ಉಲ್ಲಂಘಿಸಿದರೂ ಕೂಡ, 2013ರ ಅಧಿನಿಯಮದ 447ನೇ ಪ್ರಕರಣದಡಿಯಲ್ಲಿನ ಅಪರಾಧ ಕೂಡ ವಂಚನೆಯನ್ನು ಆಪಾದಿತ ಕೃತ್ಯದಿಂದ ಕಾಣಬೇಕಾಗಿಲ್ಲವೆಂಬ ಏಕೈಕ ಕಾರಣಕ್ಕಾಗಿ ಅನ್ವಯಿಸಲಾಗಿರುವುದಿಲ್ಲ. ***ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ –ವಿರುದ್ಧ – ಹರ್‌ಮೀತ್ ಸಿಂಗ್ ಪೈಂಟಾಲ್ ಮತ್ತು ಮತ್ತೊಬ್ಬರು*** [7]**,** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಅಧಿನಿಯಮದ 2ನೇ ಪ್ರಕರಣದ ಪರಿಭಾಷಿತ ಖಂಡದೊಂದಿಗೆ 1956ರ ಅಧಿನಿಯಮದ 291 ಮತ್ತು 5ನೇ ಪ್ರಕರಣವನ್ನು ಸಂಪೂರ್ಣವಾಗಿ ಪರೀಕ್ಷಿಸಿದ ಮೇಲೆ, ವ್ಯವಹಾರ ನಡೆಸಲು ಕಂಪನಿಗೆ ಹೊಣೆಗಾರರಾಗಿರಬೇಕೆಂದು ಪರಿಗಣಿಸಿದಂಥ ವ್ಯಕ್ತಿಗಳನ್ನು

7. (2010)3 ಎಸ್‌ಸಿಸಿ 330

ಪಟ್ಟಿ ಮಾಡಿರುತ್ತದೆ. ವರ್ಗಾವಣೀಯ ಲಿಖಿತಗಳ ಅಧಿನಿಯಮದ 141ನೇ ಪ್ರಕರಣದಡಿಯಲ್ಲಿನ ಬದ್ಧತೆಯ ಸಂಬಂಧದಲ್ಲಿ ಈ ಮುಂಚಿನ ತೀರ್ಪಿನ ಜಾಗರೂಕ ಸಮೀಕ್ಷೆಯ ಮೇಲೆ ಈ ಮುಂದಿನ ತತ್ವಗಳನ್ನು ರೂಪಿಸಲಾಗಿದೆ.

*39. . . . . . . . . . .. . . . . . .*

*(i) ಆಪಾದಿತನನ್ನೇ ಪ್ರಾತಿನಿಧಿಕವಾಗಿ ಬದ್ಧನಾಗಿಸುವಂತೆ ರೂಪಿಸದಿರುವುದಕ್ಕಾಗಿ ಫಿರ್ಯಾದಿನಲ್ಲಿನ ಕಾನೂನಿನಡಿಯಲ್ಲಿ ಅಗತ್ಯಪಡಿಸಲಾದಂತೆ ನಿರ್ದಿಷ್ಟ ದೃಢೋಕ್ತಿಗಳನ್ನು ರೂಪಿಸುವುದು ಫಿರ್ಯಾದುದಾರನ ಪ್ರಾಥಮಿಕ ಹೊಣೆಗಾರಿಕೆಯಾಗಿರುತ್ತದೆ. ಕ್ರಿಮಿನಲ್ ಬದ್ಧತೆಯನ್ನು ಸಂಯೋಜಿಸುವುದಕ್ಕೆ ಸಂಬಂಧಿಸಿದಂತೆ ವ್ಯವಹರಣೆ ಕುರಿತಂತೆ ಪ್ರತಿಯೊಬ್ಬ ನಿರ್ದೇಶಕನೂ ತಿಳಿದಿರುತ್ತಾನೆಂಬುದರ ಬಗ್ಗೆ ಯಾವುದೇ ಪೂರ್ವ ಭಾವನೆ ಇರುವುದಿಲ್ಲ.*

*(ii) 141ನೇ ಪ್ರಕರಣವು, ಅಪರಾಧಕ್ಕೆ ಸಂಬಂಧಿಸಿದಂತೆ ಎಲ್ಲಾ ನಿರ್ದೇಶಕರುಗಳನ್ನು ಬದ್ಧರನ್ನಾಗಿಸುವುದಿಲ್ಲ. ಅಪರಾಧ ನಡೆದ ಸಮಯದಲ್ಲಿ, ಕಂಪನಿಯ ವ್ಯವಹಾರದ ನಡತೆಗೆ ಸಂಬಂಧಿಸಿದಂತೆ ಪ್ರಭಾರದಲ್ಲಿರುವಂಥ ಮತ್ತು ಜವಾಬ್ದಾರರಾಗಿರುವಂಥವರ ಮೇಲೆ ಮಾತ್ರ ಕ್ರಿಮಿನಲ್ ಹೊಣೆಗಾರಿಕೆಯನ್ನು ಹೊರಿಸಲಾಗುತ್ತದೆ.*

*(iii) ಫಿರ್ಯಾದು/ಅರ್ಜಿಯಲ್ಲಿ ದೃಢಪಡಿಸಬೇಕೆಂದು ಅಗತ್ಯಪಡಿಸಿದಂಥ ಅಗತ್ಯ ಹೇಳಿಕೆಗಳಿದ್ದಲ್ಲಿ ಮಾತ್ರ, ಕಂಪನಿಗಳ ಅಧಿನಿಯಮ, 1956ರಡಿಯಲ್ಲಿ ನೋಂದಾಯಿಸಲಾದ ಅಥವಾ ಸಂಯೋಜಿಸಲಾದ*

*ಕಂಪನಿಯ ವಿರುದ್ಧ ಬದಲಿ ಹೊಣೆಗಾರಿಕೆಯನ್ನು ಊಹಿಸಬಹುದಾಗಿದ್ದು, ಇವುಗಳನ್ನು ಕಂಪನಿಗಳ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಪಾದಿತರು ಪ್ರಭಾರದಲ್ಲಿರುತ್ತಾರೆಂದು ಮತ್ತು ಹೊಣೆಗಾರರಾಗಿರುತ್ತಾರೆಂಬುದನ್ನು ಅವರು ಅವರ ಬಲದಿಂದ ಮುಂದುವರೆಯುವುದಕ್ಕೆ ಬದ್ಧರಾಗಿರುತ್ತಾರೆಂಬುದನ್ನು ಒಳಗೊಂಡಿರುವ ಅರ್ಜಿಯಲ್ಲಿನ ದೃಢೋಕ್ತಿಗಳೊಂದಿಗೆ ಕಂಪನಿಯು ಎಸಗಿದ ಅಪರಾಧಗಳಿಗಾಗಿ ಕಂಪನಿಗೆ ಬದಲಾಗಿ ಆಪಾದಿತರನ್ನು ಬದ್ಧರನ್ನಾಗಿಸುವುದಕ್ಕೆ ಹಾಗೆ ರೂಪಿಸಲಾಗಿರುತ್ತದೆ.*

*(iv) ವ್ಯಕ್ತಿಯ ಮೇಲಿನ ಬದಲಿ ಹೊಣೆಗಾರಿಕೆಯನ್ನು ವಾದಿಸಲೇಬೇಕು ಮತ್ತು ರುಜುವಾತುಪಡಿಸಲೇಬೇಕು ಮತ್ತು ಮಧ್ಯೆ ಪ್ರವೇಶಿಸಬಾರದು.*

*(v) ಆಪಾದಿತನು ವ್ಯವಸ್ಥಾಪನಾ ನಿರ್ದೇಶಕನಾಗಿದ್ದಲ್ಲಿ ಅಥವಾ ಜಂಟಿ ವ್ಯವಸ್ಥಾಪನಾ ನಿರ್ದೇಶಕನಾಗಿದ್ದಲ್ಲಿ, ಆಗ ಫಿರ್ಯಾದಿನಲ್ಲಿ ನಿರ್ದಿಷ್ಟ ದೃಢೋಕ್ತಿಗಳನ್ನು ರೂಪಿಸುವ ಅವಶ್ಯಕತೆ ಇರುವುದಿಲ್ಲ ಮತ್ತು ಅವರ ಸ್ಥಾನದ ಬಲದಿಂದ ಅವರು ಅದರೊಂದಿಗೆ ಮುಂದುವರೆಸುವುದಕ್ಕೆ ಬದ್ಧರಾಗಿರುತ್ತಾರೆ.*

*(vi) ಆಪಾದಿತನು ನಿರ್ದೇಶಕನಾಗಿದ್ದಲ್ಲಿ ಅಥವಾ ಕಂಪನಿಯ ಪರವಾಗಿ ಚೆಕ್ಕುಗಳಿಗೆ ಸಹಿ ಮಾಡುವಂಥ ಕಂಪನಿಯ ಅಧಿಕಾರಿಯಾಗಿದ್ದಲ್ಲಿ, ಮಾತ್ರ ದೂರಿನಲ್ಲಿ ನಿರ್ದಿಷ್ಟ ದೃಢೋಕ್ತಿಯನ್ನು ರೂಪಿಸುವ ಅವಶ್ಯಕತೆ ಇರುವುದಿಲ್ಲ.*

(vii) ಬದ್ಧನಾಗಿಸಬೇಕೆಂದು ಕೋರಿದ ವ್ಯಕ್ತಿಯು ಸೂಕ್ತ ಸಮಯದಲ್ಲಿ ಕಂಪನಿಯ ವ್ಯವಹಾರದ ನಡತೆಗೆ ಸಂಬಂಧಿಸಿದಂತೆ ಪ್ರಭಾರವನ್ನು ವಹಿಸಿಕೊಳ್ಳತಕ್ಕದ್ದು ಮತ್ತು ಹೊಣೆಗಾರನಾಗಿರತಕ್ಕದ್ದು. ಇಂಥ ಪ್ರಕರಣಗಳಲ್ಲಿ ನಿರ್ದೇಶಕರಿಗೆ ಯಾವುದೇ ಭಾವಿತ ಬದ್ಧತೆಯು ಇರುವುದಿಲ್ಲದಿರುವುದರಿಂದ ವಾಸ್ತವಾಂಶದಂತೆ ಇದನ್ನು ದೃಢವಾಗಿ ಹೇಳಬೇಕಾಗಿರುತ್ತದೆ.

ಪ್ರಸ್ತುತ ಪ್ರಕರಣದಲ್ಲಿ 2013ರ ಅಧಿನಿಯಮದ 447ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧದ ಸಂಬಂಧದಲ್ಲಿ ಅಪರಾಧವನ್ನು ಎಸಗಿದ್ದಾಗ್ಯೂ, ಮೇಲಿನ ತತ್ವಗಳನ್ನು, ಅದೇ ಬಲದೊಂದಿಗೆ ಕಂಪನಿ ಅಧಿನಿಯಮದಡಿಯಲ್ಲಿ ಪ್ರಾಸಿಕ್ಯೂಷನ್‌ಗೆ ಅನ್ವಯಿಸಬೇಕಾಗುತ್ತದೆ. ದೂರಿನ ಆರೋಪವು, ಆಪಾದಿತ ಅಪರಾಧಕ್ಕೆ, ಪ್ರತಿಯೊಬ್ಬ ಆಪಾದಿತನು ಹೇಗೆ ಮತ್ತು ಯಾವ ಪ್ರಮಾಣದಲ್ಲಿ ಬದಲಿ ಹೊಣೆಗಾರಿಕೆಯನ್ನು ಹೊಂದಿರುತ್ತಾನೆಂಬುದರ ಬಗ್ಗೆ ಮೌನ ವಹಿಸುತ್ತಿದೆ. ***ಮಕ್ಸೂದ್ ಸೈಯದ್ –ವಿರುದ್ಧ– ಗುಜರಾತ್ ಸರ್ಕಾರ ಮತ್ತು ಇತರರು*** [8], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಕಾನೂನನ್ನು ವಿಧಿಸಿದ ಪ್ರಕಾರ, ಅಪರಾಧವು ಕಂಪನಿಯ ಕಡೆಯಿಂದ ಆದಾಗ, ಅಪರಾಧಕ್ಕೆ ಸಂಬಂಧಿಸಿದಂತೆ ನಿರ್ದೇಶಕರುಗಳು ವೈಯಕ್ತಿಕವಾಗಿ ಬದ್ಧರಾಗಿದ್ದಲ್ಲಿ ನ್ಯಾಯಾಲಯವು ಸಂಜ್ಞೇಯತೆಯನ್ನು ತೆಗೆದುಕೊಂಡು ಪರೀಕ್ಷಿಸಬೇಕಾಗಿರುತ್ತದೆ. ಅಪರಾಧದ ಬದಲಿ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಪರಿನಿಯಮಗಳನ್ನು ಉಪಬಂಧಿಸಿದಲ್ಲಿ ಕೂಡ, ಅಗತ್ಯವಾದ ಆಪಾದನೆಗಳನ್ನು ರೂಪಿಸುವುದು ಫಿರ್ಯಾದುದಾರನ ಮೇಲಿನ ಹೊಣೆಗಾರಿಕೆಯೇ ಆಗಿರುತ್ತದೆ. ಆದರೆ, ಇಂಥ ದೃಢೋಕ್ತಿಗಳನ್ನು ಪ್ರಸ್ತುತ ಫಿರ್ಯಾದಿನಿಂದ ಕಾಣಬಹುದಾಗಿರುತ್ತದೆ.

11. ದೂರಿನ ದೃಢೋಕ್ತಿಗಳನ್ನು ಪ್ರತಿನಿಧಿಸುವುದನ್ನು ಹೊರತುಪಡಿಸಿ ವಿಷಯದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವಾಗ ಮಾನ್ಯ ಮ್ಯಾಜಿಸ್ಟ್ರೇಟರು,

8. (2008) 5 ಎಸ್‌ಸಿಸಿ 668

ಸ್ವತಂತ್ರವಾಗಿ ನಿರ್ಧಾರವನ್ನು ತೆಗೆದುಕೊಂಡಿರುವುದಿಲ್ಲ. **ಮಕ್ಷುದ್ ಸೈಯದ್** (ಈ ಹಿಂದೆ ಹೇಳಿದ) ರವರ ತೀರ್ಪಿನ ಮೇರೆಗೆ, ಮ್ಯಾಜಿಸ್ಟ್ರೇಟರು ದಾಖಲೆ ಮೇಲೆ ತಂದಂಥ ಸಾಕ್ಷ್ಯವನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಅಲ್ಲದೆ, ಆಪಾದನೆಗಳ ಅಥವಾ ಅನ್ಯಥಾ ವಿಚಾರಗಳನ್ನು ಕುರಿತಾದ ಸತ್ಯಾಸತ್ಯತೆಯ ಉತ್ತರಗಳನ್ನು ಹೊರಗೆಳೆಯಲು ಪಿರ್ಯಾದುದಾರ ಮತ್ತು ಅವರ ಸಾಕ್ಷಿದಾರರಿಗೆ ಪ್ರಶ್ನೆಗಳನ್ನು ಹಾಕಬಹುದಾಗಿರುತ್ತದೆ. ಅಲ್ಲದೆ ಎಲ್ಲಾ ಆಪಾದಿತರು ಅಥವಾ ಯಾರೇ ಆಪಾದಿತನು ಯಾವುದೇ ಅಪರಾಧವನ್ನು ಮಾಡಿದ್ದಾನೆಂದು ಮೇಲ್ನೋಟಕ್ಕೆ ಮನವರಿಕೆಯಾದರೆ ನಂತರ ಪರಿಶೀಲಿಸಬಹುದಾಗಿರುತ್ತದೆ.

ನ್ಯಾಯಿಕ ತೀರ್ಪುಗಳ ಮೇಲ್ಪಂಕ್ತಿಯಿಂದ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದಡಿಯಲ್ಲಿನ ವಿಶೇಷಾಧಿಕಾರದ ವ್ಯಾಪ್ತಿಯಡಿಯಲ್ಲಿ ಈ ನ್ಯಾಯಾಲಯವು ಕಾನೂನಿನ ಕಾರ್ಯ ವಿಧಾನದ ದುರುಪಯೋಗವನ್ನು ತಡೆಯಲು ನಡೆಯುತ್ತಿರುವ ತನಿಖೆಗಳು/ಫಿರ್ಯಾದುಗಳು ಅಥವಾ ಇತರೆ ಕಾರ್ಯವಿಧಾನಗಳನ್ನು ವಜಾ ಮಾಡುತ್ತದೆಯೆಂಬುದು ನ್ಯಾಯೋಚಿತವಾಗಿ ಇತ್ಯರ್ಥಗೊಂಡಿರುವಂಥದ್ದಾಗಿರುತ್ತದೆ.

ಈ ಹಿಂದೆ ಚರ್ಚಿಸಿರುವುದಕ್ಕೆ ಸಂಬಂಧಿಸಿದಂತೆ, ಅರ್ಜಿಗಳನ್ನು ಅಂಗೀಕರಿಸಲಾಗಿರುತ್ತದೆ. ವಿಶೇಷ ನ್ಯಾಯಾಲಯ, (ಆರ್ಥಿಕ ಅಪರಾಧಗಳು) ಬೆಂಗಳೂರು, ಇದರ ಕಡತದ ಮೇಲಿನ ಸಿ.ಸಿ. ಸಂ.214/2013ರಲ್ಲಿನ ವ್ಯವಹರಣೆಗಳನ್ನು ರದ್ದುಪಡಿಸಲಾಗಿರುತ್ತದೆ.

ಮುಖ್ಯ ಅರ್ಜಿಗಳ ವಿಲೆಯ ಹಿನ್ನೆಲೆಯಲ್ಲಿ, Iಎ ಸಂ.2/2015 ಮತ್ತು Iಎ ಸಂ.2/2014 ಅರ್ಜಿಗಳು ಪರಿಗಣನೆಗೆ ಊರ್ಜಿತವಾಗುವುದಿಲ್ಲ. ತದನುಸಾರವಾಗಿ ವಜಾಗೊಳಿಸಲಾಗಿರುತ್ತದೆ.

---